ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

**KARNATAKA LEGISLATIVE ASSEMBLY RESEARCH AND REFERENCE BRANCH**

6

ಪತ್ರಿಕಾ ತುಣುಕುಗಳು

**PAPER CLIPPINGS**

ಇಲಾಖೆ / ವಿಷಯ : DEPARTMENT / SUBJECT: ಪ್ರಧಾನಮಂತ್ರಿ

ಪತ್ರಿಕೆಯ ಹೆಸರು : NAME OF THE NEWS PAPER: ಕನ್ನಡ ಪ್ರಭ    ದಿನಾಂಕ : DATE : 1/7/2020

# ಪ್ರಧಾನಿ ಮೋದಿ ಬಂಪರ್ ಘೋಷಣೆ

# 80 ಕೋಟಿ ಬಡವರಿಗೆ 5 ತಿಂಗಳು ಫ್ರೀ ರೇಷನ್

## ಪ್ರಧಾನ ಮಂತ್ರಿ ಗರೀಬ್ ಕಲ್ಯಾಣ ಯೋಜನೆ ನವೆಂಬರ್‌ವರೆಗೂ ವಿಸ್ತರಣೆ

## ಹಬ್ಬಗಳು ಶುರುವಾಗುತ್ತಿದೆ | ಹಾಗಾಗಿ ದೀಪಾವಳಿವರೆಗೂ ಉಚಿತ ಪಡಿತರ

• **ಪಿಟಿಐ** ನವದೆಹಲಿ

ಕೊರೋನಾ ಲಾಕ್‌ಡೌನ್‌ನಿಂದಾಗಿ ಸಂಕಷ್ಟಕ್ಕೆ ಸಿಲುಕಿದ್ದ ಬಡವರಿಗೆ ಏಪ್ರಿಲ್‌ನಿಂದ 3 ತಿಂಗಳ ಕಾಲ ಉಚಿತ ಆಹಾರಧಾನ್ಯ ವಿತರಿಸುವ ಸಲುವಾಗಿ ಜಾರಿಗೊಳಿಸಲಾಗಿದ್ದ 'ಪ್ರಧಾನಮಂತ್ರಿ ಗರೀಬ್ ಕಲ್ಯಾಣ ಅನ್ನ ಯೋಜನೆ'ಯನ್ನು ಕೇಂದ್ರ ಸರ್ಕಾರ ನವೆಂಬರ್‌ವರೆಗೂ ವಿಸ್ತರಣೆ ಮಾಡಿದೆ. ಈ ಯೋಜನೆಯಡಿ ಬಡ ಕುಟುಂಬದ ಪ್ರತಿ ವ್ಯಕ್ತಿಗೆ ತಿಂಗಳಿಗೆ 5 ಕೇಜಿ ಅಕ್ಕಿ ಅಥವಾ ಗೋಧಿ ಹಾಗೂ ಕುಟುಂಬಕ್ಕೆ ಒಂದು ಕೇಜಿ ಕಡ್ಲೆಕಾಳು ವಿತರಿಸಲಾಗುತ್ತದೆ.

ಬುಧವಾರದಿಂದ ಅನ್‌ಲಾಕ್ 2.0 ಆರಂಭವಾಗುವ ಹಿನ್ನೆಲೆ ದೇಶವನ್ನುದ್ದೇಶಿಸಿ ಮಂಗಳವಾರ ಸಂಜೆ 4ಕ್ಕೆ 17 ನಿಮಿಷ ಭಾಷಣ ಮಾಡಿದ ಪ್ರಧಾನಿ ನರೇಂದ್ರ ಮೋದಿ ಅವರು, ಯೋಜನೆಯನ್ನು ಇನ್ನೂ 5 ತಿಂಗಳು ವಿಸ್ತರಿಸುತ್ತಿರುವುದರಿಂದ ಹೆಚ್ಚುವರಿಯಾಗಿ 90 ಸಾವಿರ ಕೋಟಿ ರು. ವೆಚ್ಚವಾಗಲಿದೆ. ಹಿಂದಿನ ಮೂರು ತಿಂಗಳ ಬಾಬ್ತನ್ನೂ ಗಣನೆಗೆತೆಗೆದುಕೊಂಡರೆ ಒಟ್ಟಾರೆ 1.5 ಲಕ್ಷ ಕೋಟಿ ರು. ಖರ್ಚಾಗುತ್ತದೆ. ದೇಶದ 80 ಕೋಟಿ ಬಡವರಿಗೆ ಇದರಿಂದ ಅನುಕೂಲವಾಗಲಿದೆ ಎಂದು ತಿಳಿಸಿದರು.

ಜುಲೈನಿಂದ ದೇಶದಲ್ಲಿ ಹಬ್ಬದ ಋತು ಆರಂಭವಾಗುತ್ತದೆ. ಈ ಸಂದರ್ಭದಲ್ಲಿ ಜನರ ಬೇಡಿಕೆ ಹಾಗೂ ಖರ್ಚು ಕೂಡ ಹೆಚ್ಚಾಗುತ್ತದೆ. ಇದೆಲ್ಲವನ್ನೂ ಗಮನದಲ್ಲಿಟ್ಟುಕೊಂಡು, ದೀಪಾವಳಿ ಹಾಗೂ ಛತ್ ಪೂಜೆವರೆಗೆ ಅಂದರೆ ನವೆಂಬರ್ ಅಂತ್ಯದವರೆಗೆ ಪ್ರಧಾನಮಂತ್ರಿ ಗರೀಬ್ ಕಲ್ಯಾಣ ಅನ್ನ ಯೋಜನೆಯನ್ನು ವಿಸ್ತರಿಸಲಾಗಿದೆ ಎಂದು ಘೋಷಿಸಿದರು.

↘ 9



**5 ಕೆ.ಜಿ.:** ಪ್ರತಿ ಬಡ ಕುಟುಂಬಕ್ಕೆ ಮಾಸಿಕ ತಲಾ 5 ಕಿಲೋಗ್ರಾಂ ಅಕ್ಕಿ/ಗೋಧಿ ಲಭ್ಯ

**1 ಕೆ.ಜಿ.:** ಪ್ರತಿ ಫಲಾನುಭವಿ ಕುಟುಂಬಕ್ಕೆ ತಲಾ 1 ಕಿಲೋಗ್ರಾಂ ಕಡಲೆಕಾಳು ವಿತರಣೆ

**₹90000 ಕೋಟಿ:** ಪಡಿತರ ಯೋಜನೆ 5 ತಿಂಗಳು ವಿಸ್ತರಿಸಿದ್ದರಿಂದ ಹೆಚ್ಚುವರಿ ವೆಚ್ಚ

**₹1.5 ಲಕ್ಷ ಕೋಟಿ:** ಕಳೆದ 3 ತಿಂಗಳು ಸೇರಿ ಒಟ್ಟಾರೆ ಯೋಜನೆ ಜಾರಿಗೆ ಆಗುವ ವೆಚ್ಚ

**2.5 ಪಟ್ಟು:** ಫಲಾನುಭವಿಗಳ ಸಂಖ್ಯೆ ಅಮೆರಿಕ ಜನಸಂಖ್ಯೆಗಿಂತ 2.5 ಪಟ್ಟು ಹೆಚ್ಚು

**12 ಪಟ್ಟು:** ಬ್ರಿಟನ್ ಜನಸಂಖ್ಯೆಗಿಂತ 12 ಪಟ್ಟು ಅಧಿಕ ಫಲಾನುಭವಿಗಳು

## ನಿಯಮ ಪಾಲಿಸಿ, ಯಾರೂ ಕಾನೂನಿಗಿಂತ ಮೇಲಲ್ಲ

**1** ವಿಶ್ವದ ಇತರ ದೇಶಗಳಿಗೆ ಹೋಲಿಸಿದರೆ ಭಾರತ ಕೊರೋನಾ ಸೋಂಕು ಮತ್ತು ಸಾವಿನ ಸಂಖ್ಯೆ ನಿಯಂತ್ರಣದಲ್ಲಿ ಉತ್ತಮ ಸಾಧನೆ ಮಾಡಿದೆ. ಸಕಾಲದಲ್ಲಿ ಲಾಕ್‌ಡೌನ್, ಇತರೆ ನಿರ್ಧಾರ ಇದಕ್ಕೆ ಕಾರಣ.

**2** ಅನ್‌ಲಾಕ್-1 ಜಾರಿ ಬಳಿಕ ಜನರು ವೈಯಕ್ತಿಕ ಹಾಗೂ ಸಾಮಾಜಿಕ ವರ್ತನೆಗಳಲ್ಲಿ ನಿರ್ಲಕ್ಷ್ಯ ವಹಿಸುವುದನ್ನು ಕಂಡಿದ್ದೇನೆ. ಇದು ಸರಿಯಲ್ಲ. ಇದು ಹೆಚ್ಚು ಎಚ್ಚರಿಕೆಯಿಂದ ಇರಬೇಕಾದ ಸಂದರ್ಭ.

**3** ಇದು ಗಂಭೀರ ವಿಷಯ. ನಾವು ಶಿಸ್ತು ಪಾಲಿಸಬೇಕು. ಯಾರು ನಿಯಮ ಪಾಲಿಸುವುದಿಲ್ಲವೋ ಅವರಿಗೆ ಎಚ್ಚರಿಕೆ ನೀಡಬೇಕು. ಕಾನೂನಿಗಿಂತ ಯಾರೂ ಮೇಲಲ್ಲ, ಅದು ಪ್ರಧಾನಿಯಾದರೂ ಸರಿಯೇ.

**4** ನಾವು ಕೆಮ್ಮು, ನೆಗಡಿ, ಜ್ವರ ಹೆಚ್ಚಳ ಆಗುವ ಮಳೆಗಾಲದ ಸಮಯವನ್ನು ಪ್ರವೇಶಿಸುತ್ತಿದ್ದೇವೆ. ಹೀಗಾಗಿ ಪ್ರತಿಯೊಬ್ಬರೂ ನಿಮ್ಮ ಆರೋಗ್ಯದ ಬಗ್ಗೆ ಹೆಚ್ಚು ಕಾಳಜಿ ವಹಿಸಬೇಕು.

**5** ದಯವಿಟ್ಟು ಎಲ್ಲರೂ ಸುರಕ್ಷಿತವಾಗಿರಿ. ಪ್ರತಿಯೊಬ್ಬರು ಇನ್ನೊಬ್ಬರಿಂದ 2 ಗಜ ಅಂತರ ಕಾಪಾಡಿಕೊಳ್ಳಿ ಮತ್ತು ಮುಖವನ್ನು ಮುಖಗವಸಿನಿಂದ ಮುಚ್ಚಿಕೊಂಡು ಸುರಕ್ಷಿತವಾಗಿರಿ.